ಆ) ೧೯೮೯–೯೦ರಲ್ಲಿ ರೂ.೧೧,೭೭,೨೩ಳಿಗಳನ್ನು ಖರ್ಚು ಮಾಡಲಾಗಿದೆ.

ಇ) ಮತ್ತು ಈ) ರೈಟ್ಸ್ ಸಂಸ್ಥೆಯವರಿಂದ ಬೆಂಗಳೂರುನಗರ ಸಂಚಾರ ಸುಗಮಗೊಳಿಸಲು ಒಂದು ವಿಶಾಲ ಯೋಜನೆ ತಯಾರಿಸಿದ್ದು ಇದೆ. ಈ ಯೋಜನೆಯನ್ನು ಬೆಂಗಳೂರು ಮೆಟ್ರೊಪಾಲಿಟಿಯನ್ನು ರೀಜನಲ್ ಡೆವಲಪ್‌ಮೆಂಟ್ ಅಥಾರಿಟಿ ಅವರಿಗೆ ಕಳುಹಿಸಿಕೊಡಲಾಗಿದೆ. ಒಟ್ಟಾರೆ ಈ ಯೋಜನೆಯ ವೆಚ್ಚ ರೂ. ೧೫.೦೫ ಕೋಟಿ. ಆಗಿರುವ ೬ ಸಂಚಾರ ವಲಯ ಸಿಬ್ಬಂದಿಯನ್ನು ಹೆಚ್ಚಿಸಲು ಮತ್ತುಹೊಸದಾಗಿ ೫ ಸಂಚಾರ ಉಪ ವಲಯಗಳನ್ನು ರಚಿಸುವುದು ಹಾಗೂ ೫ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು, ೧೫ಎಎಸ್‌ಐಗಳು, ೧೦೦ ಮುಖ್ಯ ಪೇದೆಗಳು, ೪೦೦ ಪೋಲೀಸ್ ಪೇದೆಗಳ ಹುದ್ದೆಯನ್ನು ಹೊಸದಾಗಿ ಸೃಷ್ಟಿಸುವುದರ ಮೂಲಕ ಸಂಚಾರ ವ್ಯವಸ್ಥೆ ಸುಗಮಗೊಳಿಸಲು ಅನುಕೂಲವಾಗುವಂತೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಮೈಸೂರು ಸ್ಪಿನ್ನಿಂಗ್ ಮತ್ತು ವೀವಿಂಗ್ ಮಿಲ್ಸ್ (ರಾಜಾಮಿಲ್) ಬೆಂಗಳೂರು ಪುನರಾರಂಭಿಸುವ ಬಗ್ಗೆ

೬೩೦ (೬೪೭) ಶ್ರೀ ಪೆರಿಕಲ್. ಎಂ. ಮಲ್ಲಪ್ಪ (ಚಿಕ್ಕಪೇಟೆ). ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮೈಸೂರು ಸ್ಪಿನ್ನಿಂಗ್ ಮಿಲ್ಸ್ (ರಾಜಾಮಿಲ್ಸ್) ಬೆಂಗಳೂರು ತೆರೆಯಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

ಆ) ಹಾಗಿದ್ದಲ್ಲಿ ತೆಗೆದುಕೊಂಡಿರುವ ಕ್ರಮ ?

ಇ) ಯಾವ ದಿನಾಂಕದಿಂದ ಕಾರ್ಖಾನೆಯನ್ನು ಪುನರಾರಂಭಿಸಲಾಗಿದೆ?

ಶ್ರೀ ಕೆ. ಪೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಹೌದು.

ಆ) ಆಡಳಿತವರ್ಗ ಮತ್ತು ಕಾರ್ಮಿಕ ಸಂಘದ ಪದಾಧಿಕಾರಿಗಳ ಚರ್ಚೆ ನಂತರ ಈ ಕೆಳಕಂಡ ವಿಭಾಗಗಳು ಕೆಲಸ ನಿರ್ವಹಿಸುತ್ತಿವೆ.

೧) ವಾರ್‌ಪಿಂಗ್

೨) ಸಿಕ್ಸಿಂಗ್

೩) ಎಸ್. ಡ್ರಾಯಿಂಗ್

೪) ಲೂಂ ಶೆಡ್

೫) ಫೋಲ್ಡಿಂಗ್

೬) ಇಂಜಿನಿಯರಿಂಗ್.

ಅಲ್ಲದೆ ಉಳಿದ ವಿಭಾಗಗಳನ್ನು ತೆರೆಯಲು ಆಡಳಿತವರ್ಗ ಮತ್ತು ಕಾರ್ಮಿಕ ವರ್ಗದ ಮುಖಂಡರು ಚರ್ಚೆ ನಡೆಸುತ್ತಿದ್ದಾರೆ.

ಇ) ೪-೫-೧೯೯೦.

ಬೆಂಗಳೂರು ನಗರದಲ್ಲಿನ ಗೃಹ ವೀಕ್ಷಣಾಲಯದ ಪ್ರವೇಶಧನದಲ್ಲಿ ಶಾಲಾ ಮಕ್ಕಳಿಗೆ ಹಾಗೂ ವಿದ್ಯಾರ್ಥಿಗಳಿಗೆ ರಿಯಾಯಿತಿ ನೀಡುವ ಬಗ್ಗೆ

೬೩೧ (೧೫೭೭) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಂಗಳೂರು ನಗರದಲ್ಲಿನ ಗೃಹ ವೀಕ್ಷಣಾಲಯಕ್ಕೆ ನಿಗದಿಪಡಿಸಿರುವ ಪ್ರವೇಶ ಧನ ?

ಆ) ಶಾಲಾಮಕ್ಕಳಿಗೆ ಹಾಗೂ ವಿದ್ಯಾರ್ಥಿಗಳಿಗೆ ರಿಯಾಯಿತಿಯನ್ನೇನಾದರೂ ನೀಡಲಾಗಿದೆಯೆ ?

ಇ) ಗಾರುತಿನ ಚೀಟಿಯನ್ನು ಹಾಜರುಪಡಿಸಿದರೆ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಪ್ರವೇಶವನ್ನು ನೀಡುವ ಪ್ರಸ್ತಾವನೆಯೇನಾದರೂ ಇದೆಯೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ವಯಸ್ಕರಿಗೆ ರೂ ೫–೦೦ ಮಕ್ಕಳಿಗೆ ಮತ್ತು ವಿಧ್ಯಾರ್ಥಿಗಳಿಗೆ ರೂ. ೨–೦೦

ಆ) ಹೌದು. ವಿದ್ಯಾರ್ಥಿಗಳಿಗೆ ಪ್ರವೇಶಧನ ರೂ. ೨–೦೦ ನಿಗದಿಪಡಿಸಿದೆ. ಶಾಲೆಗಳಿಗೆ ಬ್ಲಾಕ್ ಬುಕ್ಕಿಂಗ್ ಮಾಡುವ ವ್ಯವಸ್ಥೆ ಹಾಗೂ ವಿಶೇಷ ಪ್ರದರ್ಶನ ವ್ಯವಸ್ಥೆ ಇದೆ.

ಇ) ಇಲ್ಲ.

ಚಿಕ್ಕಮಗಳೂರು ನಗರದಲ್ಲಿ ಟ್ರಾಫಿಕ್ ಪೋಲೀಸ್ ಠಾಣೆಯ ಸ್ಥಾಪನೆ

೮೩೫ (೧೫೨೬) ಶ್ರೀ ಸಗೀರ್ ಆಹ್ಮದ್ (ಚಿಕ್ಕಮಗಳೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಚಿಕ್ಕಮಗಳೂರು ನಗರದಲ್ಲಿ ಟ್ರಾಫಿಕ್ ಪೋಲೀಸ್ ಠಾಣೆಯನ್ನು ಸ್ಥಾಪಿಸುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ, ಈ ಬಗ್ಗೆ ತೆಗೆದುಕೊಂಡ ಕ್ರಮ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಂಖ್ಯೆ

೮೩೬ (೧೬೩೩) ಶ್ರೀ ಎಸ್. ಶಫಿ ಅಹಮದ್ (ತುಮಕೂರು).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಒಟ್ಟು ಕೈಗಾರಿಕಾ ತರಬೇತಿ ಸಂಸ್ಥೆಗಳೆಷ್ಟು? (ಅವುಗಳ ಹೆಸರು ಮತ್ತು ಸ್ಥಳಗಳನ್ನು ಕೊಡುವುದು).

ಆ) ಇವುಗಳ ಪೈಕಿ ಖಾಸಗೀ ಸಂಸ್ಥೆಗಳೆಷ್ಟು?

ಇ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಪ್ರತಿ ವರ್ಷ ಖರ್ಚು ಮಾಡಿದ ಒಟ್ಟು ಹಣವೆಷ್ಟು?

ಈ) ೧) ಈ ಸಂಸ್ಥೆಗಳ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

೨) ಸರ್ಕಾರವು ಈ ಸಂಸ್ಥೆಗಳನ್ನು ಸಹಾಯದನ ಸಂಸ್ಥೆಗಳಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಹೆಚ್. ಪಾಟೀಲ್ (ಕಾರ್ಮಿಕ ಸಚಿವರು).—

ಅ) ೧೬೬ (ಪಟ್ಟಿ ಲಗತ್ತಿಸಿದೆ).

ಆ) ೧೩೧.

ಇ) ವರ್ಷಕ್ಕೆ ಸರಾಸರಿ ರೂ. ೭೦೦.೬೦ ಲಕ್ಷ.

ಈ) ೧) ೧) ಸರ್ಕಾರಿ ೫೩೫೦

೨) ಖಾಸಗೀ ೫೫೨೦

೧೦೮೭೦

೨)ಸದ್ಯಕ್ಕೆ ಅಂತಹ ಪ್ರಸ್ತಾವನೆ ಇಲ್ಲ.